## KARNATAKA LOKAYUKTA

No. Compt/Uplok/GLB/2272/2016/DRE-3
Clubbed with GLB-2273 & 2274/2016

M.S. Building,
Dr. B.R. Ambedkar Veedhi,
Bengaluru, dated 18/08/2018.

### REPORT UNDER SECTION 12(3) OF KARNATAKA LOKAYUKTA ACT, 1984

**Sub:** Proceedings initiated against (1) Sri Ashok D. Sutar, President, Belamagi Grama Panchayath, Aland Taluk, Kalaburgi District, (2) Sri Dayanand Jadhav, Panchayath Development Officer, Belamagi Grama Panchayath, Aland Taluk, Kalaburgi District, (3) Sri Sudarshan, Junior Engineer, PRE Sub-Division, Aland, Kalaburgi District, (4) Sri Vilas S. Harasoora, Water Shed Development Officer, (Assistant Agriculture Officer), Aland, Kalaburgi District and (5) Sri Chandrakanth, Section Officer, Social Forestry, Forest Department, Aland, Kalaburgi District - about their misconduct as Public/Government servants– reg.,

*****

An investigation was taken up under Section 9 of The Karnataka Lokayukta Act, 1984, on the basis of complaint's filed by 1) Sri. Ambaraya S/o Sharnappa Jimrafi, **(Uplok/GLB/2272/2016),** 2) Sri. Shivasharanappa Kalyan Rao Mali Patil **(Uplok/GLB/2273/2016),** Belamagi, Aland Taluk, Kalburgi District-585316 and 3) Sri. Kupendra s/o Ambaraya Thavade, **(Uplok/GLB/2274/2016)** Balkheda village, Ashraya Colony, Kalburgi (hereinafter referred to as complainant's for short) against (1) Sri Ashok D. Sutar, President, Belamagi Grama Panchayath, Aland Taluk, Kalaburgi District, (2) Sri Dayanand Jadhav, Panchayath

Development Officer, Belamagi Grama Panchayath, Aland Taluk, Kalaburgi District, (3) Sri Sudarshan, Junior Engineer, PRE Sub-Division, Aland, Kalaburgi District, (4) Sri Vilas S. Harasoora, Water Shed Development Officer, (Assistant Agriculture Officer), Aland, Kalaburgi District and (5) Sri Chandrakanth, Section Officer, Social Forestry, Forest Department, Aland, Kalaburgi District (herein after referred to as 'respondent Nos. 1 to 5' for short).

2. Complainant Sri Ambaraya in his complaint has alleged that the respondents have committed illegalities and misappropriation of funds without execution of the works under MGNREGA scheme for the year 2011-2012. It is also alleged that the names of dead persons, minor children, school going children have been shown as labourers in NMR's. The same labourers have been shown to have worked in two different works at the same time. Two job cards have been created in the name of same persons. Two accounts have been opened in the post office in the name of same person. Respondent no.1/President has raised bogus bills for desilting of well, even though no well is mentioned in the RTC of his land. By opening bogus accounts in the post office, respondents have drawn money and thereby have misappropriated the public funds.

3. The complainant Sri Shivasharanappa Kalyan Rao Mali Patil has also made similar allegations in Compt/Uplok/GLB-2273/2016.

4. The complainant Sri Kupendra in his complaint has alleged that the respondents have created bogus documents in his

name and in the names his family members without their knowledge showing them as labourers who has worked in formation of bund in the land of Sharanappa Chandrappa during the year 2011-2012 under MGNREGA scheme and thereby have raised bogus bills. They have opened bogus accounts in the name of the complainant at Belamagi post office and thereby have drawn money.

5. Report was called from Superintendent of Police, Karnataka Lokayukta, Kalaburgi who in turn has submitted common report dated 19/04/2017 in all the above said three cases along with the report of **Investigation Officer Sri Raghavendra**, Police Inspector, Karnataka Lokayukta Kalaburgi dated 15/04/2017. The report of I.O. and observations with respect to the misconduct of the respondents are as follows:-

6. I) ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಬೆಳಮಗಿ ಗ್ರಾಮಪಂಚಾಯತಿಯಲ್ಲಿ 2011–12 ನೇ ಸಾಲಿನಲ್ಲಿ, ಅವ್ಯವಹಾರ ನಡೆದ ಬಗ್ಗೆ ಅಂಬಾರಾಯ ಇವರು ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ–2272/2016ರಲ್ಲಿ (ತನಿಖಾ ವರದಿಯಲ್ಲಿ ಅರ್ಜಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ–5322/2012 ಎಂದು ತಪ್ಪಾಗಿ ನಮೂದಾಗಿರುತ್ತದೆ) ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ವಿಚಾರಣೆಗೆ ಸ್ಥಳ ಪರಿಶೀಲನೆ ಕುರಿತು ಬೆಳಮಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸನಗುಂದಾ, ಬೆಳಮಗಿ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ:

II) ಸನಗುಂದಾ ಗ್ರಾಮದ ನೀಲಕಂಠ ಪಾಟೀಲ ರವರ ಹೊಲದಲ್ಲಿ ಬಂಡಿಂಗ್ ಕೆಲಸ.

ಸದರಿ ಕಾಮಗಾರಿ ಸ್ಥಳಕ್ಕೆ ಅರ್ಜಿದಾರರೊಂದಿಗೆ ಭೇಟಿ ನೀಡಿದ್ದು, ಸನಗುಂದಾ ಗ್ರಾಮದ ನೀಲಕಂಠರಾವ ತಂದೆ ಶರಣಪ್ಪ ಪಾಟೀಲ ವಯಾ: 53 ವರ್ಷ ಸಾ:ಸನಗುಂದಾ ಇವರ ಹೊಲ ಸರ್ವೆ ನಂ. 77 ರಲ್ಲಿ ಭೇಟಿ ನೀಡಿ, ಸದರಿಯವರನ್ನು ಕಾಮಗಾರಿಯ ಬಗ್ಗೆ ವಿಚಾರಿಸಲಾಗಿ, 2011–12ನೇ ಸಾಲಿನಲ್ಲಿ ನನ್ನ ಹೊಲದಲ್ಲಿ ಗ್ರಾಮ ಪಂಚಾಯತಿ ಬೆಳಮಗಿ ವತಿಯಿಂದ ಯಾವುದೇ ಬಂಡಿಂಗ್ ಕಾಮಗಾರಿ ಕೆಲಸ ಮಾಡಿರುವುದಿಲ್ಲ ಮತ್ತು ಈ ಕಾಮಗಾರಿ ನನ್ನ ಹೊಲಕ್ಕೆ

ಮಂಜೂರಾಗಿರುತ್ತದೆ ಅಂತಾ ನನಗೆ ಗ್ರಾಮ ಪಂಚಾಯತಿಯವರು ತಿಳಿಸಿರುವುದಿಲ್ಲ ಮತ್ತು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನನಗೆ ಸರ್ಕಾರದಿಂದ ಯಾವುದೇ ಹಣ ನೀಡಿರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಅಲ್ಲದೇ ಅರ್ಜಿದಾರ ಮತ್ತು ಸದರಿ ಹೊಲದ ಮಾಲಿಕರೊಂದಿಗೆ ಸದರಿ ಹೊಲವನ್ನು ಸುತ್ತಾಡಿ ನೋಡಲಾಗಿ ಯಾವುದೇ ರೀತಿಯ ಬಂಡಿಂಗ್ ಕೆಲಸ ಮಾಡಿರುವುದು ಕಂಡು ಬಂದಿರುವುದಿಲ್ಲ. ಅರ್ಜಿದಾರನು ತನ್ನ ಅರ್ಜಿಯಲ್ಲಿ ತಿಳಿಸಿದ ವಿಷಯವು ನಿಜವಾಗಿರುತ್ತದೆ.

In the plan of action for the year 2011-12 said work (Work code no.15-15-002-030-00**6**-01-05-11) is taken up at the cost of Rs. 0.50 lakhs. The report of I.O shows that the above work has not been executed. Under the circumstances the entire amount of Rs. 0.50 lakhs is to be inferred as misappropriated by Respondents 1, 2 & 4.

**2) ಬೆಳಮಗಿ ಗ್ರಾಮದ ಸಿದ್ರಾಮಪ್ಪ ಬಸ್ನಾಕರ ಹೊಲದಲ್ಲಿ ಬದು ನಿರ್ಮಾಣ ಕೆಲಸ :**

ಸದರಿ ಕಾಮಗಾರಿಯ ಬಗ್ಗೆ ಅರ್ಜಿದಾರನೊಂದಿಗೆ ಸದರಿ ಹೊಲಕ್ಕೆ ಭೇಟಿ ನೀಡಿದ್ದು, ಸದರಿ ಹೊಲದ ಮಾಲಿಕರಾದ ಶ್ರೀ.ಸಿದ್ರಾಮಪ್ಪ ಬಸ್ನಾಕರ ಇವರು ಊರಲ್ಲಿ ಹಾಜರ ಇರದ ಕಾರಣ ಜಂಟಿ ಮಾಲಿಕರಾದ ಶ್ರೀಮತಿ. ಜಗದೇವಿ ಗಂಡ ಶಿವಾನಂದ ಬಸ್ನಾಕರ್ ಇವರ ಗಂಡನಾದ ಶಿವಾನಂದ ತಂದೆ ಧೂಳಪ್ಪ ಬಸನಾಳಕರ್ ಇವರು ಹೊಲದಲ್ಲಿ ಹಾಜರಿದ್ದು, ಸದರಿಯವರಿಗೆ ತಮ್ಮ ಹೊಲದಲ್ಲಿ 2011–12ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಬೆಳಮಗಿ ವತಿಯಿಂದ ನರೇಗಾ ಯೋಜನೆ ಅಡಿಯಲ್ಲಿ ಬದು ನಿರ್ಮಾಣ ಕಾಮಗಾರಿ ಆಗಿರುವ ಬಗ್ಗೆ ವಿಚಾರಿಸಿದ್ದು, ಸದರಿಯವರು 2011–12ನೇ ಸಾಲಿನಲ್ಲಿ ನರೇಗಾ ಯೋಜನೆ ಅಡಿಯಲ್ಲಿ ನಮ್ಮ ಹೊಲಕ್ಕೆ ಬದು ನಿರ್ಮಾಣ ಕಾಮಗಾರಿ ಮಂಜೂರಾಗಿದ್ದು ತನಗೆ ತಿಳಿದಿದ್ದು, ನಿಗದಿತ ಸಮಯದಲ್ಲಿ ಬದು ನಿರ್ಮಾಣ ಕಾಮಗಾರಿ ಕೆಲಸ ಪೂರ್ಣವಾಗಿರುವುದಿಲ್ಲ. ನರೋಣಾ ಪೋಲೀಸ್ ಠಾಣೆಯಲ್ಲಿ ಈ ಅವ್ಯವಹಾರದ ಬಗ್ಗೆ ಪ್ರಕರಣ ದಾಖಲಾದ ನಂತರ 2014–15ನೇ ಸಾಲಿನಲ್ಲಿ ನಮ್ಮ ಹೊಲಕ್ಕೆ ಬದು ನಿರ್ಮಾಣ ಮಾಡಿರುತ್ತಾರೆ ಅಂತಾ ತಮ್ಮ ಹೇಳಿಕೆ ನೀಡಿರುತ್ತಾರೆ. ಈ ಕಾಮಗಾರಿಯನ್ನು ಪೂರ್ಣಗೊಳಿಸದೇ ಹಣ ಪಡೆಯುವ ಉದ್ದೇಶ ಹೊಂದಿದ್ದು, ದೂರು ದಾಖಲಾದ ನಂತರ ತಮ್ಮ ತಪ್ಪನ್ನು ಮುಚ್ಚಿ ಹಾಕಲು ಕಾಮಗಾರಿಯನ್ನು ಕೈಗೊಂಡಿರುತ್ತಾರೆ.

On perusal of the checklist at page no. 105 of I.O. Report, the said work is shown to have been completed on 17/3/2012. The copy of the muster roll no. 2050 produced at page no. 109 show

that an amount of Rs. 98,500/- has been spent towards wages of the labourers. The above report of IO show that the said work has not been executed in the year 2012 and is stated to be executed in the year 2014-15 after lodging criminal case. Therefore it is to be inferred that the said amount of Rs. 98,500/- was misappropriated by respondents 1, 2 & 4 (who have signed the documents) by falsifying the documents.

3) ಬೆಳಮಗಿ ಗ್ರಾಮ ಹನುಮಾನ ಗುಡಿಯ ಹತ್ತಿರ ಸಸಿ ನೆಡುವುದು

ಸದರಿ ಕಾಮಗಾರಿ ಕುರಿತು ಗ್ರಾಮಸ್ಥರನ್ನು ಮತ್ತು ಗ್ರಾಮ ಪಂಚಾಯತಿಯ ಸದ್ಯದ ಪಿ.ಡಿಓ ಮತ್ತು ಗ್ರಾಮ ಪಂಚಾಯತಿಯ ಬಿಲ್ ಕಲೇಕ್ಟರ್ ರವರನ್ನು ಮತ್ತು ಅರ್ಜಿದಾರನನ್ನು ಕರೆದುಕೊಂಡು ಸದರಿ ಕಾಮಗಾರಿಯಾದ ಬೆಳಮಗಿ ಗ್ರಾಮದ ಹನುಮಾನ ದೇವಸ್ಥಾನದ ಹತ್ತಿರ ಸಸಿ ನೆಟ್ಟಿರುವ ಸ್ಥಳವನ್ನು ಪರಿಶೀಲಿಸಿ ನೋಡಲಾಗಿ, ಕಾಮಗಾರಿಯ ಅವಧಿ ಮುಗಿದು ಸುಮಾರು 5 ವರ್ಷ ಗತಿಸಿದ ಕಾರಣ ಸಸಿ ನೆಟ್ಟಿರುವ ಬಗ್ಗೆ ಈ ಸ್ಥಳದಲ್ಲಿ ಯಾವುದೇ ರೀತಿಯ ಗುರುತುಗಳು ಕಂಡು ಬಂದಿರುವುದಿಲ್ಲ ಹಾಗೂ ಈ ಸ್ಥಳದಲ್ಲಿ ಯಾವುದೇ ಒಂದು ಬೆಳೆದಿರುವ ಗಿಡ ಇರುವುದಿಲ್ಲ.

The checklist produced at page no. 131 of I.O. Report pertaining to the said work show that the work was completed on 28/03/2012. The copy of the muster roll no. 2876 produced at page no. 134 of I.O. report show that an amount of Rs. 48,750/- has been spent towards wages of the labourers. The report of IO shows that no plantation was found in the said place. Photographs showing 3 stages of work are not produced by the respondents. Therefore it is to be inferred that the said work was not executed and an amount of Rs. 48,750/- was misappropriated by respondents 1, 2 & 5 by falsifying the documents.

4) ದೇವಿಂದ್ರ ರಾಮಚಂದ್ರ ಸುತಾರ ರವರ ಹೊಲದಲ್ಲಿ ಭಾವಿ ಹೂಳೆತ್ತುವುದು.

ಸದರಿ ಸ್ಥಳಕ್ಕೆ ಅರ್ಜಿದಾರನೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನೋಡಲಾಗಿ, ಹೊಲದಲ್ಲಿ ಒಂದು ಸುಮಾರು 10–12 ಫೀಟ ಆಳದ ಬಾವಿ ಇದ್ದು, ಬಾವಿಯಲ್ಲಿ ಯಾವುದೇ ನೀರು ಇರುವುದು ಕಂಡುಬಂದಿರುವುದಿಲ್ಲ. ಸದರಿ ಕಾಮಗಾರಿಯು 2011–12ನೇ ವರ್ಷದಲ್ಲಿ ಕೈಗೊಂಡಿರುವ ಬಗ್ಗೆ ನಮೂದಾಗಿದ್ದು, ಸದರಿ ಕಾಮಗಾರಿ ಗತಿಸಿ ಸುಮಾರು 5 ವರ್ಷ ಕಾಲಾವಧಿ ಕಳೆದಿದ್ದರಿಂದ ಯಾವುದೇ ಸ್ಪಷ್ಟವಾದ ಅಭಿಪ್ರಾಯ ಹೇಳಲು ಸಾಧ್ಯವಾಗುವುದಿಲ್ಲ.

ಹಾಗೂ ಅವರ ಹೊಲದಲ್ಲಿಯೇ ಬಾವಿಯ ಹತ್ತಿರದಲ್ಲಿ ಒಂದು ಕಡೆಗೆ ಚೆಕ್ ಡ್ಯಾಂ ಇದ್ದು, ಇನ್ನೊಂದಡೆಯಲ್ಲಿ ಕೊರೆಯಿಸಿದ ಬೋರವೆಲ್, ಹಾಗೂ ಸ್ವಲ್ಪವೆ ಅಂತರದಲ್ಲಿ ಇನ್ನೊಂದು ಚೆಕ್ ಡ್ಯಾಂ ಇರುವುದು ಕಂಡು ಬಂದಿರುತ್ತದೆ. ಇದರ ಬಗ್ಗೆ ಅರ್ಜಿದಾರರನ್ನು ಕೇಳಲಾಗಿ ಆಗಿನ ಪಂಚಾಯತ ಅಧ್ಯಕ್ಷರಾದ ಶ್ರೀ.ಅಶೋಕ ಸುತಾರ ರವರು ಸರ್ಕಾರದ ವತಿಯಿಂದ ಮಂಜೂರಾಗುವ ಹೆಚ್ಚಿನ ಕಾಮಗಾರಿಗಳನ್ನು ತಮ್ಮದೇ ಹೊಲದಲ್ಲಿ ಮಾಡಿಸಿಕೊಂಡಿರುತ್ತಾರೆ ಅಂತಾ ಮೌಖಿಕವಾಗಿ ತಿಳಿಸಿದ್ದು, ಸದರಿ ಹೊಲದಲ್ಲಿನ ಬೋರವೆಲ್ ಕೂಡಾ ಸರ್ಕಾರದ ಅನುದಾನದಲ್ಲಿ ಹಾಕಿಸಿಕೊಂಡಿರುತ್ತಾರೆ ಎಂದು ತಿಳಿಸಿದರು. ಸದರಿಯವರು ಹೇಳಿದಂತೆ ಹೊಲದಲ್ಲಿ ಎರಡು ಚೆಕ್ ಡ್ಯಾಂ, ಒಂದು ಬೋರವೆಲ್ ಇರುವುದು ಕಂಡು ಬಂದಿರುತ್ತದೆ.

5) ಬೆಳಮಗಿ ಗ್ರಾಮದ ಮಲ್ಲಿನಾಥ ಸಂಗಣ್ಣ ಹೊಲದಲ್ಲಿ ಭಾವಿ ಹೂಳೆತ್ತುವುದು.

ಸದರಿ ಸ್ಥಳಕ್ಕೆ ಅರ್ಜಿದಾರನೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನೋಡಲಾಗಿ ಸದರಿ ಕಾಮಗಾರಿಯು 2011–12ರಲ್ಲಿ ನಡೆದಿರುವ ಬಗ್ಗೆ ಯಾವುದೇ ಕುರುಹುಗಳು ಗೋಚರಿಸಿರುವುದಿಲ್ಲ.

In the action report for the year 2011-12 said work (Work code no.15-15-002-030-**030**-04-10-11) is taken up at the cost of Rs. 0.84 lakhs. The report of I.O shows that the above work has not been executed. Under the circumstances the entire amount of Rs. 0.84 lakhs is to be inferred as misappropriated by Respondents 1, 2 & 3.

6) ಬೆಳಮಗಿ ಗ್ರಾಮದ ಸಂಗಣ್ಣ ಡೋರ ಸರ್ವೆ ನಂ. 57ರ ಜಮೀನು ಅಭಿವೃದ್ಧಿ.

ಸದರಿ ಕಾಮಗಾರಿಯ ಬಗ್ಗೆ ಸ್ಥಳ ಪರಿಶೀಲನೆ ಮಾಡಲು ಬೆಳಮಗಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಪ್ರಮುಖರು ಮತ್ತು ಗ್ರಾಮ ಪಂಚಾಯತಿಯ ನೌಕರರನ್ನು ಶ್ರೀ. ಸಂಗಣ್ಣ ಡೋರ ಇವರ ಬಗ್ಗೆ ವಿಚಾರಿಸಲಾಗಿ ಈ ಹೆಸರಿನವರು ಬೆಳಮಗಿ ಗ್ರಾಮದಲ್ಲಿ ಯಾರೂ ಇರುವುದಿಲ್ಲ ಮತ್ತು ಈ ಹೆಸರಿನಲ್ಲಿ ಬೇಳಮಗಿ ಗ್ರಾಮ ಸೀಮಾಂತರದಲ್ಲಿ ಜಮೀನು ಇರುವ ಬಗ್ಗೆ ತಮಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ತಿಳಿಸಿದರು. ಈ ಕುರಿತು ಅರ್ಜಿದಾರನಿಗೆ ವಿಚಾರಿಸಿದಾಗ ಸದರಿ ಅರ್ಜಿದಾರನೂ ಸಹ ತನಗೆ ಸಂಗಣ್ಣ ಡೋರ ಎಂಬುವವರ ಬಗ್ಗೆ ತಿಳಿದಿರುವುದಿಲ್ಲ ಅಂತಾ ತಿಳಿಸಿದ್ದು, ಈ ಕಾಮಗಾರಿ ನಡೆದ ಸ್ಥಳವನ್ನು ತೋರಿಸುವವರು ಯಾರೂ ಲಭ್ಯವಿಲ್ಲದ್ದರಿಂದ ಸದರಿ ಕಾಮಗಾರಿ ಬಗ್ಗೆ ಪರಿಶೀಲನೆ ಕೈಕೊಂಡಿರುವುದಿಲ್ಲ.

In the action report for the year 2011-12 said work (Work code no.15-15-002-030-**033**-06-05-11) is taken up at the cost of Rs. 1.00 lakh. There is no clear description of the work taken

up for development of the said land. The report of I.O show that there is no such person by name Sanganna Dora at Belamagi Village and inspite of it, the work is shown to be taken up in his land bearing sy.no. 57. Under the circumstances the entire amount of Rs. 1.00 lakh is to be inferred as misappropriated by respondents1, 2 & 3.

ಈ ಮೇಲ್ಕಂಡ ಕಾಮಗಾರಿಗಳು ಅಲ್ಲದೇ ಅರ್ಜಿದಾರನು ತನ್ನ ಅರ್ಜಿಯಲ್ಲಿ ನಮೂದಿಸಿದ ಈ ಕೆಳಕಂಡ ಅಂಶಗಳ ಕುರಿತು ಪರಿಶೀಲನೆ ಮಾಡಿದ್ದು, ಅವುಗಳ ವಿವರ ಈ ಕೆಳಕಂಡಂತೆ ಇರುತದೆ.

1) **ಗ್ರಾಮ ಪಂಚಾಯತಿಯ ಅಧ್ಯಕ್ಷರು ಅಶೋಕ ದೇವಿಂದ್ರಪ್ಪ ಸುತಾರ ಇವರು ಅಧಿಕಾರಿಗಳನ್ನು ಬಳಸಿಕೊಂಡು ಅವರಿಗೆ ಸುಳ್ಳು ಮಾಹಿತಿ ನೀಡಿ ತನ್ನ ಸ್ವಂತ ಹೊಲದಲ್ಲಿ ಪಹಣಿ ಪತ್ರದಂತೆ ಭಾವಿ ಇಲ್ಲದಿದ್ದರೂ ತನ್ನ ತಂದೆಯ ಹೆಸರಿನಲ್ಲಿರುವ ಜಮೀನಿನಲ್ಲಿ ಭಾವಿ ಹೂಳೆತ್ತುವ ಕಾಮಗಾರಿ ಮಾಡಿಸಿ ಅದರ ಭೋಗಸ್ ಬಿಲ್ಲು ತಯಾರಿಸಿ ಹಣ ಪಾವತಿಸಿಕೊಂಡಿರುತ್ತಾನೆ.**

ಸದರಿ ಅಂಶದ ಬಗ್ಗೆ ಪರಿಶೀಲಿಸಲಾಗಿ ಅಶೋಕ ತಂದೆ ದೇವಿಂದ್ರಪ್ಪ ಸುತಾರ ಇವರ ತಂದೆಯ ಹೆಸರಿನಲ್ಲಿರುವ ಹೊಲ ಸರ್ವೆ ನಂ. 359ರ ಪಹಣಿ ಪತ್ರಿಕೆಯನ್ನು ಪಡೆದುಕೊಂಡು ಪರಿಶೀಲಿಸಲಾಗಿ ಸದರಿ ಹೊಲದಲ್ಲಿ ಬಾವಿ ಇರುವ ಬಗ್ಗೆ ಪಹಣಿಯಲ್ಲಿ ನಮೂದಾಗಿರುವುದಿಲ್ಲ. ಸದರಿ ಹೊಲಕ್ಕೆ ಅರ್ಜಿದಾರನೊಂದಿಗೆ ಭೇಟಿ ನೀಡಿ ಪರಿಶೀಲಿಸಲಾಗಿ ಸದರಿ ಕಾಮಗಾರಿಯು 2011-12ರಲ್ಲಿ ನಡೆದಿರುವ ಬಗ್ಗೆ ನಮೂದಾಗಿದ್ದು, ಈಗ ಸುಮಾರು 5 ವರ್ಷ ಕಾಲಾವಧಿ ಕಳೆದಿದ್ದರಿಂದ ಯಾವುದೇ ಸ್ಪಷ್ಟವಾದ ಅಭಿಪ್ರಾಯ ಹೇಳಲು ಸಾಧ್ಯವಾಗುವುದಿಲ್ಲ. ಹಾಗೂ ಅವರ ಹೊಲದಲ್ಲಿಯೇ ಬಾವಿಯ ಹತ್ತಿರದಲ್ಲಿ ಒಂದು ಕಡೆಗೆ ಚೆಕ್ ಡ್ಯಾಂ ಇದ್ದು, ಇನ್ನೊಂದಡೆಯಲ್ಲಿ ಕೊರೆಯಿಸಿದ ಬೋರವೆಲ್, ಹಾಗೂ ಸ್ವಲ್ಪವೆ ಅಂತರದಲ್ಲಿ ಇನ್ನೊಂದು ಚೆಕ್ ಡ್ಯಾಂ ಇರುವುದು ಕಂಡು ಬಂದಿರುತ್ತದೆ. ಇದರ ಬಗ್ಗೆ ಅರ್ಜಿದಾರರನ್ನು ಕೇಳಲಾಗಿ ಆಗಿನ ಪಂಚಾಯತ ಅಧ್ಯಕ್ಷರಾದ ಶ್ರೀ.ಅಶೋಕ ಸುತಾರ ರವರು ಸರ್ಕಾರದ ವತಿಯಿಂದ ಮಂಜೂರಾಗುವ ಹೆಚ್ಚಿನ ಕಾಮಗಾರಿಗಳನ್ನು ತಮ್ಮದೇ ಹೊಲದಲ್ಲಿ ಮಾಡಿಸಿಕೊಂಡಿರುತ್ತಾರೆ ಅಂತಾ ಮೌಖಿಕವಾಗಿ ತಿಳಿಸಿದ್ದು, ಸದರಿ ಹೊಲದಲ್ಲಿನ ಬೋರವೆಲ್ ಕೂಡಾ ಸರ್ಕಾರದ ಅನುದಾನದಲ್ಲಿ ಹಾಕಿಸಿಕೊಂಡಿರುತ್ತಾರೆ ಎಂದು ತಿಳಿಸಿದರು. ಸದರಿಯವರು ಹೇಳಿದಂತೆ ಹೊಲದಲ್ಲಿ ಎರಡು ಚೆಕ್ ಡ್ಯಾಂ, ಒಂದು ಬೋರವೆಲ್ ಇರುವುದು ಕಂಡು ಬಂದಿರುತ್ತದೆ. ಇದನ್ನು ಪರಿಶೀಲಿಸಿದಾಗ ಅಶೋಕ ಸುತಾರ, ಅಧ್ಯಕ್ಷರು, ಗ್ರಾಮ ಪಂಚಾಯತಿ, ಬೆಳಮಗಿ ರವರು ತಮ್ಮ ಅಧಿಕಾರದ ದುರುಪಯೋಗ ಪಡಿಸಿಕೊಂಡು, ಸರ್ಕಾರಕ್ಕೆ ತಪ್ಪು

ಮಾಹಿತಿ ನೀಡಿ ಸರ್ಕಾರದ ಅನುದಾನವನ್ನು ಹಾಗೂ ಸರ್ಕಾರಿ ಅಧಿಕಾರಿಗಳ ಸಹಾಯದಿಂದ ಸರ್ಕಾರಿ ಅನುದಾನವನ್ನು ತನ್ನ ಲಾಭಕ್ಕಾಗಿ ದುರುಪಯೋಗ ಪಡಿಸಿಕೊಂಡಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

2) ಎನ್‌ಎಂಆರ್ ನಲ್ಲಿ ಸತ್ತವರ ಹೆಸರಿನಲ್ಲಿ ಸುಳ್ಳು ಹಾಜರಿ ಹಾಕಿಸಿರುತ್ತಾರೆ.

ಅರ್ಜಿದಾರನು ತನ್ನ ಅರ್ಜಿಯಲ್ಲಿ ನಮೂದಿಸಿದಂತೆ 1) **ಚಂದ್ರಾಮಪ್ಪ** ತಂದೆ ರೇವಣಸಿದ್ದಪ್ಪ ಸಾ:ಬೆಳಮಗಿ ಇವರು ದಿನಾಂಕ: **11/08/2010 ರಂದು ಮೃತಪಟ್ಟಿದ್ದು** ಇರುತ್ತದೆ ಇವರ ಹೆಸರನ್ನು ಜಾಬಕಾರ್ಡ ನಂ. 71628ರಲ್ಲಿ ಸೇರಿಸಿದ್ದು 2) **ಶಿವಶರಣಪ್ಪ** ತಂದೆ ಮಾದಪ್ಪ ಸಾ:ಬೆಳಮಗಿ ಇವರು ದಿನಾಂಕ: **09/08/2007 ರಂದು ಮೃತಪಟ್ಟಿದ್ದು**, ಇವರ ಹೆಸರನ್ನು ಜಾಬ ಕಾರ್ಡ ನಂ. 71627ರಲ್ಲಿ ಸೇರಿಸಿದ್ದು ಕಂಡುಬಂದಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಶ್ರೀ ಕವಿರಾಜ ತಂದೆ ಚಂದ್ರಾಮಪ್ಪ ಅಣಜೆ @ ಪಾಟೀಲ ವಯ: 45 ವರ್ಷ ಸಾ: ಬೆಳಮಗಿ ಮತ್ತು ಅಮೃತ ತಂದೆ ಶಿವಶರಣಪ್ಪ ಡೋಲೆ ವಯ: 55 ವರ್ಷ ಸಾ:ಬೆಳಮಗಿ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿಯವರಿಗೆ ತಮ್ಮ ಮತ್ತು ತಮ್ಮ ತಂದೆಯವರ ಹೆಸರಿನಲ್ಲಿ ಯಾವುದೇ ಜಾಬಕಾರ್ಡ ಮತ್ತು ಪೋಸ್ಟ್ ಆಫೀಸದಲ್ಲಿ ಖಾತೆ ತೆಗೆದಿರುವ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿ, ಇಲ್ಲಿಯವರೆಗೆ ತಾವು ಸರ್ಕಾರದಿಂದ ಯಾವುದೇ ರೀತಿಯ ಕೂಲಿ ಹಣ ಪಡೆದುಕೊಂಡಿರುವುದಿಲ್ಲ ಮತ್ತು ಗ್ರಾಮ ಪಂಚಾಯತಿ ಬೆಳಮಗಿ ರವರು ನರೇಗಾ ಯೋಜನೆ ಅಡಿಯಲ್ಲಿ ತಮಗೆ ಯಾವುದೇ ಕಾಮಗಾರಿಯ ಕೂಲಿ ಕೆಲಸಕ್ಕೆ ಕರೆದಿರುವುದಿಲ್ಲವೆಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಸದರಿ ಮೃತ ಇಬ್ಬರೂ ಬೆಳಮಗಿ ಗ್ರಾಮದ **ದೇವಿಂದ್ರಪ್ಪ ರಾಮಚಂದ್ರ ಸುತಾರ ಇವರ ಹೊಲದಲ್ಲಿ ಬಾವಿ ಹೂಳೆತ್ತುವ ಕಾಮಗಾರಿಯಲ್ಲಿ** ಕೆಲಸ ಮಾಡಿದ ಬಗ್ಗೆ ಗ್ರಾ.ಪಂ. ಬೆಳಮಗಿ ರವರು ಎನ್‌ಎಂಆರ್‌ದಲ್ಲಿ ದಿನಾಂಕ:10/03/2012 ರಿಂದ 24/03/2012 ರವರೆಗೆ ಇಬ್ಬರೂ ಮೃತಪಟ್ಟ ವ್ಯಕ್ತಿಗಳು ಕಾಮಗಾರಿಗೆ ಹಾಜರಾಗಿ ಕೂಲಿ ಕೆಲಸ ಮಾಡಿರುತ್ತಾರೆಂದು ಸುಳ್ಳು ಹಾಜರಿ ಹಾಕಿ, ಪೋಸ್ಟ ಮಾಸ್ಟರ್ ಲೋಕೇಶ ಇವರ ಸಹಾಯದಿಂದ ಮೃತರ ಮಕ್ಕಳಾದ ಕವಿರಾಜ ತಂದೆ ಚಂದ್ರಾಮಪ್ಪ ಪಾಟೀಲ್ ಇವರ ಹೆಸರಿನಲ್ಲಿ ಅವರಿಗೆ ತಿಳಿಯದೇ ಅಂಚೆ ಖಾತೆ ಸಂಖ್ಯೆ: 52812143 ನೇದ್ದನ್ನು ತೆರೆದು ಮತ್ತು ಅಮೃತ ತಂದೆ ಶರಣಪ್ಪ ಡೋಲೆ ಇವರ ಹೆಸರಿನಲ್ಲಿ ಅಂಚೆ ಖಾತೆ ಸಂಖ್ಯೆ: 52812145 ನೇದ್ದನ್ನು ಅಮೃತ ಇವರಿಗೆ ತಿಳಿಯದೇ ತೆರೆದು ಅವರ ಖಾತೆಗಳಿಗೆ ಕೂಲಿ ಹಣವನ್ನು ಜಮಾ ಮಾಡಿ ಆ ಹಣವನ್ನು ಈ ಹಿಂದಿನ ಗ್ರಾಮ ಪಂಚಾಯತಿ ಅಧ್ಯಕ್ಷ ಅಶೋಕ ಸುತಾರ, ಹಾಗೂ ಇತರರು ಪಡೆದುಕೊಂಡಿರುತ್ತಾರೆಂದು ದಾಖಲೆಗಳಿಂದ ಸಾಬೀತಾಗಿರುತ್ತದೆ. (**ಪುಟ ಸಂಖ್ಯೆ: 166 ರಿಂದ 168** ರಲ್ಲಿ ಮೃತ ಶರಣಪ್ಪ ಡೋಲೆ ಈತನ ಹೆಸರನ್ನು ಜಾಬಕಾರ್ಡನಲ್ಲಿ ಸೇರಿಸಿದ ಬಗ್ಗೆ ನಮೂದಾಗಿರುತ್ತದೆ. **ಪುಟ**

**ಸಂಖ್ಯೆ: 284**ರಲ್ಲಿ ಸದರಿ ಮೃತರ ಹೆಸರಿನಲ್ಲಿ ಸುಳ್ಳು ಹಾಜರಿ ಹಾಕಿದ್ದು ಇರುತ್ತದೆ. ಈ ಕುರಿತು ಮೃತ ಮರಣ ಪ್ರಮಾಣ ಪತ್ರಗಳನ್ನು ಮಾನ್ಯ ತಹಸೀಲ್ದಾರರು, ಆಳಂದ ರವರಿಂದ ಪಡೆದುಕೊಂಡಿದ್ದು, ಪುಟ ಸಂಖ್ಯೆ: **459** ರಿಂದ **463** ನೇದ್ದವುಗಳನ್ನು ಪರಾಂಬರಿಸುವುದು.)

The report of IO show that the dead person by name Chandramappa (Job card no. 71628) and Shivasharannapa (Job card no. 71627) and their children have been shown in muster roll no. 2469 as labourers and wages have been deposited to the accounts created in the name of their children Kaviraj Chandramappa Patil (Post office a/c no. 52812143) and Amrutha S/o Sharanappa Dhole (Post office a/c no. 52812145) without their knowledge and the respondents 1, 2 & others have withdrawn the said money and thereby have misappropriated the funds. Under the circumstances it is to be inferred that the work of Desilting of the well in the land of Devendrappa Ramchandra Suthar has not been executed and the entire funds of Rs. 0.84 lakhs have been misappropriated by falsifying the records by respondents 1, 2 & 3.

**3) ಎನ್ಎಂಆರ್ ನಲ್ಲಿ ಚಿಕ್ಕ ಮಕ್ಕಳ ಹೆಸರಿನಲ್ಲಿ ಹಾಜರಿ ಹಾಕಿರುತ್ತಾರೆ.**

**ಮತ್ತು**

**4) ಎನ್ಎಂಆರ್ ನಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಹಾಜರಿ ಹಾಕಿರುತ್ತಾರೆ.**

ಸದರಿ ಮೇಲಿನ ಅಂಶ ನಂ.3 ಮತ್ತು 4 ನೇದ್ದವುಗಳ ಬಗ್ಗೆ ಪರಿಶೀಲನೆ ಮಾಡಲಾಗಿ ಸದರಿ ಬೆಳಮಗಿ ಗ್ರಾಮದ ಶ್ರೀ. ಧನರಾಜ ತಂದೆ ರಾಮಲಿಂಗಪ್ಪ ಮುರುಡ ವಯ: 41 ವರ್ಷ ಇವರ ಮಕ್ಕಳಾದ **1) ಗುರು** @ ಗುಂಡಪ್ಪ ತಂದೆ ಧನರಾಜ ಮುರುಡ (ಆಧಾರ ಕಾರ್ಡಿನಲ್ಲಿ ನಮೂದಿಸಿದಂತೆ ಈತನ ಹುಟ್ಟಿದ ದಿನಾಂಕ:17/01/1997 ಇರುರತ್ತದೆ)

**2) ಕಿರಣ** ತಂದೆ ಧನರಾಜ ಮುರುಡ (ಆಧಾರ ಕಾರ್ಡಿನಲ್ಲಿ ನಮೂದಿಸಿದಂತೆ ಹುಟ್ಟಿದ ವರ್ಷ 1998 ಇರುತ್ತದೆ)

**3) ವಿನೋದ** ತಂದೆ ದೇವರಾಜ ಮುರುಡ

**4) ಚನ್ನಬಸಪ್ಪ** @ ಚನ್ನಬಸವ ತಂದೆ ದೇವರಾಜ ಮುರುಡ

ಈ ಮೇಲೆ ನಮೂದು ಮಾಡಿದ 4 ಜನ ವಿದ್ಯಾರ್ಥಿಗಳು 2011–12ನೇ ಸಾಲಿನಲ್ಲಿ 18 ವರ್ಷಕ್ಕಿಂತ ಚಿಕ್ಕವರಾಗಿದ್ದರೂ ಸಹ ಮತ್ತು ವಿದ್ಯಾರ್ಥಿಗಳಾಗಿ ಶಾಲೆಗೆ ಹೋಗುತ್ತಿದ್ದರೂ ಸಹ

ಸದರಿಯವರು 2011-12ನೇ ಸಾಲಿನಲ್ಲಿ ನರೇಗಾ ಯೋಜನೆ ಅಡಿಯಲ್ಲಿ ಕೂಲಿ ಕೆಲಸ ಮಾಡಿರುವಂತೆ ಎನ್.ಎಂ.ಆರ್‌ದಲ್ಲಿ ಖೋಟ್ಟಿ ಹಾಜರಾತಿ ಹಾಕಿದ್ದು ಕಂಡು ಬಂದಿರುತ್ತದೆ. ಈ ಕುರಿತಂತೆ ಸದರಿ ವಿದ್ಯಾರ್ಥಿಗಳ ತಂದೆಯಾದ ಶ್ರೀ. ಧನರಾಜ ತಂದೆ ರಾಮಲಿಂಗಪ್ಪ ಮುರುಡ ಮತ್ತು ತಾಯಿಯಾದ ಶ್ರೀಮತಿ. ಸುಶೀಲಾಬಾಯಿ ಮತ್ತು ಶ್ರೀಮತಿ. ಕನ್ಯಾಕುಮಾರಿ ಗಂಡ ದೇವರಾಜ ಮುರುಡ ಇವರ ಹೇಳಿಕೆಗಳನ್ನು ಪಡೆದಿದ್ದು, ತಾವಾಗಲಿ ತಮ್ಮ ಕುಟುಂಬದ ಯಾವುದೇ ಸದಸ್ಯರು ಗ್ರಾಮ ಪಂಚಾಯತಿಯ ನರೇಗಾ ಯೋಜನೆ ಅಡಿಯಲ್ಲಿ ಯಾವುದೇ ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ. ಮತ್ತು ಈ ಕುರಿತು ಸರ್ಕಾರದಿಂದ ಯಾವುದೇ ಕೂಲಿ ಹಣ ಪಡೆದಿರುವುದಿಲ್ಲ. ತಮ್ಮ ಹೆಸರಿನಲ್ಲಿ ಯಾವುದೇ ಜಾಬಕಾರ್ಡ ಇರುವುದಿಲ್ಲ ಮತ್ತು ಪೋಸ್ಟ ಆಫೀಸದಲ್ಲಿ ಯಾವುದೇ ಖಾತೆ ಹೊಂದಿರುವುದಿಲ್ಲವೆಂದು ತಮ್ಮ ಹೇಳಿಕೆಯಲ್ಲಿ ನುಡಿದಿರುತ್ತಾರೆ. ಸದರಿಯವರು ಕಾಮಗಾರಿ ಸಂಖ್ಯೆ: 15-15-002030009-0105-11 (1515002030/ಎಲ್‌ಡಿ/944 7705681044) ಬೆಳಮಗಿ ಗ್ರಾಮದ **ಶರಣಪ್ಪ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿಯಲ್ಲಿ** ಕೆಲಸ ಮಾಡಿದ ಬಗ್ಗೆ ಅಧಿಕಾರಿಗಳು ಕಾಮಗಾರಿ ಅವಧಿ 03.03.2012 ರಿಂದ 17.03.2012 ರ ವರೆಗೆ ಎನ್‌ಎಂಆರ್‌ದಲ್ಲಿ ಸುಳ್ಳು ಹಾಜರಿ ಹಾಕಿದ್ದು ದಾಖಲಾತಿಗಳಿಂದ ಸಾಬೀತಾಗಿರುತ್ತದೆ. ಹಾಗೂ ಧನರಾಜ ಮುರುಡ ಈತನ ಹೆಸರಿನಲ್ಲಿ ಅಂಚೆ ಖಾತೆ ಸಂಖ್ಯೆ: 52812360 ಹಾಗೂ ಅವರ ತಂದೆ ರಾಮಲಿಂಗಪ್ಪ ಮುರುಡ ಇವರ ಹೆಸರಿನಲ್ಲಿ ಅಂಚೆ ಖಾತೆ ಸಂಖ್ಯೆ: 52812359 ಇರುವ ಬಗ್ಗೆ ಹಾಗೂ ಆ ಖಾತೆಗಳಿಗೆ ಇವರ ಕೂಲಿ ಹಣ ಪಾವತಿಸಿದ ಬಗ್ಗೆ ದಾಖಲಾತಿಗಳಲ್ಲಿ ನಮೂದಾಗಿದ್ದು, ಈ ಎರಡು ಅಂಚೆ ಖಾತೆಗಳ ಬಗ್ಗೆ ಅಂಚೆ ಕಛೇರಿಯಲ್ಲಿ ಹೋಗಿ ವಿಚಾರಿಸಿ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಎರಡು ಖಾತೆಗಳು ಅವರ ಹೆಸರಿನಲ್ಲಿ ಇರದೇ ಬೇರೆಯವರ ಹೆಸರಿನಲ್ಲಿ ಇದ್ದ ಬಗ್ಗೆ ಕಂಡು ಬಂದಿರುತ್ತದೆ. ಕಾರಣ ಗ್ರಾಮ ಪಂಚಾಯತಿಯ ಅಧ್ಯಕ್ಷರು ಹಾಗೂ ಇತರೆ ಅಧಿಕಾರಿಗಳು ಸೇರಿ ಹಣವನ್ನು ದುರುಪಯೋಗ ಪಡಿಸಿಕೊಂಡ ಬಗ್ಗೆ ಸಾಬೀತಾಗುತ್ತದೆ. **(ಪುಟ ಸಂಖ್ಯೆ: 342 ಮತ್ತು 459 ರಿಂದ 463 ನೇದ್ದನ್ನು ಪರಾಂಬರಿಸುವುದು.)**

The report of IO show that the minor children by name Guru alias Gundappa, Kiran, Vinodha and Channabasappa alias Channabasava, all sons of Devaraj Murudha have been shown as labourers in muster roll no. 2048 pertaining to the work of formation of bundh in the land of Sharanappa Chandrappa of Belamagi village and wages have been shown to be paid to them. IO has clearly stated that false attendance of the above

said persons have been noted in the muster roll and the post office accounts to which the amount has been deposited are not standing in the name of the above labourers. Under the circumstances entire amount of Rs. 98,500/- shown to be spent for executing the said work is to be inferred as misappropriated by the respondents by falsifying the documents.

**5) ಎನ್‌ಎಂಆರ್‌ದಲ್ಲಿ ಒಂದೇ ದಿನ ಎರಡು ಕಾಮಗಾರಿಯಲ್ಲಿ ಎರಡು ಕುಟುಂಬದ ಹಾಜರಿ ಹಾಕಿರುತ್ತಾರೆ.**

ಸದರಿ ಅಂಶವನ್ನು ಪರಿಶೀಲಿಸಿದ್ದು, **ಹಣಮಂತ ತಂದೆ ಮಲ್ಕಪ್ಪ ಬಸನಾಕರ** ಇವರ ಹೆಸರಿನಲ್ಲಿ ಎರಡು ಜಾಬ್ ಕಾರ್ಡ ತೆರೆದಿದ್ದು, 1) ಕೆಎನ್ 15-002-030-003/1364 (ಅಂಚೆ ಖಾತೆ ಅಕೌಂಟ್ ನಂ. 5282561 ) ಮತ್ತು 2) ಕೆಎನ್ -15-002-030-003/1213 (ಅಂಚೆ ಖಾತೆ ಅಕೌಂಟ್ ನಂ:58212371) ಈ ರೀತಿ **ಎರಡು ಜಾಬಕಾರ್ಡಗಳನ್ನು ತೆರೆದಿದ್ದು,** ಸದರಿ ಎರಡು ಜಾಬಕಾರ್ಡ ಇರುವ ಬಗ್ಗೆ ಹಣಮಂತ ತಂದೆ ಮಲ್ಕಪ್ಪ ಬಸನಾಕರ್ ಇವರಿಗೂ ಗೊತ್ತಿರದಂತೆ ಖೋಟ್ಟಿಯಾಗಿ ಗ್ರಾಮ ಪಂಚಾಯತಿಯ ಅಧ್ಯಕ್ಷ, ಪಿ.ಡಿ.ಓ ಮತ್ತು ಪೋಸ್ಟ ಮಾಸ್ಟರ್ ಕೂಡಿಕೊಂಡು ಒಂದೇ ವ್ಯಕ್ತಿಗೆ ಒಂದೇ ಅವಧಿಗೆ ಎರಡು ಜಾಬಕಾರ್ಡಗಳನ್ನು ಮತ್ತು ಅಂಚೆ ಖಾತೆಗಳನ್ನು ಸೃಷ್ಟಿಸಿ ಇವರ ಹಾಜರಾತಿಯನ್ನು ಒಂದೇ ಸಮಯದಲ್ಲಿ ಎರಡು ಕಾಮಗಾರಿಗಳಲ್ಲಿ ತೋರಿಸಿ ಕೂಲಿ ಹಣವನ್ನು ಹಣಮಂತ ರವರ ಹೆಸರಿನಲ್ಲಿ ಪಡೆದುಕೊಂಡು ಹಣ ದುರುಪಯೋಗ ಪಡಿಸಿಕೊಂಡಿದ್ದು ದಾಖಲೆಗಳಿಂದ ಸಾಬೀತಾಗಿರುತ್ತದೆ. ಹಾಗೂ ಅಂಚೆ **ಖಾತೆ ಸಂಖ್ಯೆ 5282561 ಎಂಬ ಖಾತೆಯು ಅಂಚೆ ಕಛೇರಿಯಲ್ಲಿ ಇಲ್ಲದೇ ಇದ್ದರೂ ಕೂಡಾ** ಆ ಖಾತೆಯಲ್ಲಿ ಹಣ ಪಾವತಿಸಿದ ಬಗ್ಗೆ ದಾಖಲಾತಿಗಳಲ್ಲಿ ನಮೂದು ಮಾಡಿ ಹಣವನ್ನು ದುರುಯೋಗ ಪಡಿಸಿಕೊಂಡಿರುತ್ತಾರೆ.

ಈ ಕೆಳಕಂಡ ಎರಡು ಕಾಮಗಾರಿಗಳಲ್ಲಿ ಮೇಲ್ಕಂಡ ಹಣಮಂತ ತಂದೆ ಮಲ್ಕಪ್ಪ ಬಸನಾಕರ ಇವರ ಸುಳ್ಳು ಹಾಜರಿ ಹಾಕಿದ್ದು ಕಂಡು ಬಂದಿರುತ್ತದೆ.

1) **ಹನುಮಾನ ಗುಡಿಯ ಹತ್ತಿರ ಸಸಿ ನೆಡುವ ಕಾರ್ಯಕ್ರಮ ಕಾಮಗಾರಿ ಕೋಡ್:** (1515002030/ಡಿಪಿ/17163601502163138) 15-15-002-030-**018**-02-06-11 ಅವಧಿ: 14/03/2012 ರಿಂದ 28/03/2012.

2) **ಸಿದ್ರಾಮಪ್ಪ ಬಸನಾಕರ್ ಇವರ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿ ಕೋಡ್:** 1515-00-030-**010**-01-05-11 (1515002030/ಎಲ್‌ಡಿ/9447705681046. ಕಾಮಗಾರಿಯ ಅವಧಿ 03.03.2012 ರಿಂದ 17.03.2012.

ಅಲ್ಲದೇ ಸದರಿಯವರ ಹೆಸರಿನಲ್ಲಿ ಅಂಚೆ ಖಾತೆಗಳು ಅಂಚೆ ಕಚೇರಿಯಲ್ಲಿಯೇ ಲಭ್ಯ ಇರುವುದಿಲ್ಲವೆಂದು ತಿಳಿದು ಬಂದ ಕಾರಣ ಇವುಗಳು ಸುಳ್ಳು ಅಕೌಂಟ ನಂಬರಗಳೆಂದು ಪರಿಗಣಿಸಲಾಗಿದೆ. ಈ ಕೆಲಸಕ್ಕೆ ಗ್ರಾಮದ ಪೋಸ್ಟ ಮಾಸ್ಟರ್ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಪಿ.ಡಿ.ಓ. ರವರೊಂದಿಗೆ ಕೂಡಿಕೊಂಡು ನಕಲಿ ಅಂಚೆ ಖಾತೆಗಳ ಸಂಖ್ಯೆಗಳನ್ನು ನೀಡಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿದ್ದು ಸಾಬೀತಾಗಿರುತ್ತದೆ. **(ಪುಟ ಸಂಖ್ಯೆ: 109, 135 ನೇದ್ದವುಗಳನ್ನು ಮತ್ತು 486 ನೇದ್ದನ್ನು ಪರಾಂಬರಿಸುವುದು.)**

In view of the above report the above said 2 works i.e. the work of formation of bund in the land of Sidrammappa Busnakar and the work of Plantation near Hanuman Temple is to be inferred as not executed and documents have been falsified and the money spent has been misappropriated by falsifying the documents.

**6) ಎನ್ಎಂಆರ್‌ದಲ್ಲಿ ಒಬ್ಬ ವ್ಯಕ್ತಿಯ ಕುಟುಂಬದ ಹೆಸರಿನಲ್ಲಿ ಎರಡು ಕಡೆ ಜಾಬ್‌ಕಾರ್ಡ ಹಾಜರಿ ಹಾಕಿರುತ್ತಾರೆ.**

**7) ಎನ್ಎಂಆರ್‌ದಲ್ಲಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಪೋಸ್ಟ ಆಫೀಸ್‌ದಲ್ಲಿ ಎರಡು ಅಂಚೆ ಖಾತೆ ತೆರೆದಿರುತ್ತಾರೆ.**

ಮೇಲಿನ ಅಂಶ ನಂ. 6 ಮತ್ತು 7 ಗಳನ್ನು ಪರಿಶೀಲಿಸಲಾಗಿ ಅಂಶ ಸಂಖ್ಯೆ: 5ಕ್ಕೆ ಅನುಗುಣವಾಗಿ ಇರುತ್ತವೆ. ಅಂಶ ಸಂಖ್ಯೆ:5 ರಲ್ಲಿ ನಮೂದಿಸಿದಂತೆ ಖೋಟ್ಟಿ ಜಾಬಕಾರ್ಡ ಮತ್ತು ಅಸ್ತಿತ್ವದಲ್ಲಿ ಇರದೇ ಇರುವ ಪೋಸ್ಟ ಖಾತೆಗಳನ್ನು ತೋರಿಸಿ ಹಣ ದುರುಯೋಗ ಪಡಿಸಿಕೊಂಡಿದ್ದು ದಾಖಲಾತಿಗಳಿಂದ ಸಾಬೀತಾಗಿರುತ್ತವೆ. **(ಪುಟ ಸಂಖ್ಯೆ: 109, 135 ನೇದ್ದವುಗಳನ್ನು ಮತ್ತು 486 ನೇದ್ದನ್ನು ಪರಾಂಬರಿಸುವುದು.)**

**8) ಎನ್ಎಂಆರ್‌ದಲ್ಲಿ ಹೊರ ದೇಶದಲ್ಲಿ ಕೆಲಸ ಮಾಡಲು ಹೋಗಿರುವವರ ಹೆಸರಿನಲ್ಲಿ ಹಾಜರಿ ಹಾಕಿರುತ್ತಾರೆ.**

ಸದರಿ ಅಂಶದ ಬಗ್ಗೆ ವಿಚಾರಿಸಲಾಗಿ ಬೆಳಮಗಿ ಗ್ರಾಮದ ಶ್ರೀ. **ಬಸವರಾಜ ತಂದೆ ಶಾಂತಪ್ಪ ಸಿಂಗೆ** ವಯ: 38 ವರ್ಷ ಇವರನ್ನು ವಿಚಾರಿಸಿಲಾಗಿ ಸದರಿಯವರು 2011-12 ನೇ ಸಾಲಿನ ನರೇಗಾ ಯೋಜನೆ ಅಡಿಯಲ್ಲಿ ಗ್ರಾಮ ಪಂಚಾಯತಿ ಬೆಳಮಗಿ ವ್ಯಾಪ್ತಿಯಲ್ಲಿ ಯಾವುದೇ ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ. ಈ 2011-12 ರ ಅವಧಿಯಲ್ಲಿ ತಾನು **ಓಮನ್ ದೇಶದಲ್ಲಿ ಕೂಲಿ ಕೆಲಸಕ್ಕೆ ಹೋಗಿರುತ್ತೇನೆಂದು** ತಿಳಿಸುತ್ತಾ ತನ್ನ ಪಾಸಪೋರ್ಟ

ನಂ.ಜಿ-4158687 ನೇದ್ದನ್ನು ಹಾಜರಪಡಿಸಿದ್ದು, ಅದನ್ನು ಪರಿಶೀಲಿಸಿ ನೋಡಲಾಗಿ ಸದರಿಯವನು 2011-12 ನೇ ಸಾಲಿನಲ್ಲಿ ಭಾರತದಲ್ಲಿ ಇರದೇ ಹೊರದೇಶವಾದ ಓಮನ್ ದೇಶದಲ್ಲಿ ಇರುವುದು ಧೃಢಪಟ್ಟಿರುತ್ತದೆ. ಮತ್ತು ತನ್ನ ಹೆಸರಿನಲ್ಲಿ ಯಾವುದೇ ಜಾಬಕಾರ್ಡ ಮತ್ತು ಪೊಸ್ಟ ಆಫೀಸದಲ್ಲಿ ಖಾತೆ ಇರುವುದಿಲ್ಲವೆಂದು ಮತ್ತು ತನ್ನ ಹೆಂಡತಿ **ರೇಖಾ** ಇವಳ ಹೆಸರಿನಲ್ಲಿಯೂ ಯಾವುದೇ ಜಾಬಕಾರ್ಡ ಮತ್ತು ಪೊಸ್ಟ ಆಫೀಸದಲ್ಲಿ ಖಾತೆ ತೆಗೆಸಿರುವುದಿಲ್ಲವೆಂದು ಮತ್ತು ತನ್ನ ಅಣ್ಣ **ಶಂಕರ** ಮತ್ತು ಅತ್ತಿಗೆ **ಶರಣಮ್ಮ** ಇವರುಗಳು ಈಗ ಸುಮಾರು 15 ವರ್ಷಗಳಿಂದ ಮಹಾರಾಷ್ಟ್ರದ ಪುಣೆಯಲ್ಲಿ ಕೂಲಿ ಕೆಲಸಕ್ಕೆಂದು ಹೋಗಿದ್ದು, ಅವರು ಇಲ್ಲಿಯವರೆಗೆ ಊರಿಗೆ ಮರಳಿ ಬಂದಿರುವುದಿಲ್ಲ. ಅವರ ಹೆಸರಿನಲ್ಲಿಯೂ ಯಾವುದೇ ಜಾಬಕಾರ್ಡ ಇರುವುದಿಲ್ಲ ಮತ್ತು ಅವರೂ ನರೇಗಾ ಯೋಜನೆ ಅಡಿಯಲ್ಲಿ 2011-12 ನೇ ಸಾಲಿನಲ್ಲಿ ಯಾವುದೇ ಕೂಲಿ ಕೆಲಸ ಮಾಡಿರುವುದಿಲ್ಲವೆಂದು ತನ್ನ ಹೇಳಿಕೆಯನ್ನು ನೀಡಿರುತ್ತಾರೆ. ಶ್ರೀಮತಿ. ರೇಖಾ ಗಂಡ ಬಸವರಾಜ ಸಿಂಗೆ ಇವರ ಹೆಸರಿನಲ್ಲಿ ಖೊಟ್ಟಿ ಜಾಬಕಾರ್ಡ ನಂ.30624 ಮತ್ತು ಅಂಚೆ ಖಾತೆ ನಂ: 5282558 ಎಂದು ನಮೂದಿಸಿ, ಬಸವರಾಜ ಸಿಂಗೆ ಇವರು ವಿದೇಶದಲ್ಲಿದ್ದ ಅವಧಿಯಲ್ಲಿ ಹಾಗೂ ಅವರ ಅಣ್ಣ ಶಂಕರ ಮತ್ತು ಅತ್ತಿಗೆ ಶರಣಮ್ಮ ಇವರುಗಳು ಊರಲ್ಲಿ ಇಲ್ಲದೇ ಇದ್ದರೂ ಅವರ ಹೆಸರಿನಲ್ಲಿ **ಬೆಳಮಗಿ ಗ್ರಾಮದ ಹನುಮಾನ ಗುಡಿಯ ಹತ್ತಿರ ಸಸಿ ನೆಡುವ ಕಾಮಗಾರಿಯಲ್ಲಿ** ಕೆಲಸ ಮಾಡಿದ ಬಗ್ಗೆ ಗ್ರಾ.ಪಂ. ಬೆಳಮಗಿ ರವರು ಎನ್ಎಂಆರ್‌ದಲ್ಲಿ ಸುಳ್ಳು ಹಾಜರಿ ಹಾಕಿದ್ದು ಕಂಡುಬಂದಿರುತ್ತದೆ. ಸದರಿ ಜಾಬಕಾರ್ಡದಲ್ಲಿ ಸದಸ್ಯರ ಹೆಸರುಗಳ ಬಗ್ಗೆ ಕುಟುಂಬಸ್ಥರಲ್ಲಿ ಕೇಳಲಾಗಿ ಅದರಲ್ಲಿ ಕುಟುಂಬದಲ್ಲಿ ಪರಿಚಯ ಇಲ್ಲದೇ ಇರುವ ಯಾರದೋ ಇಬ್ಬರ ಹೆಸರನ್ನು ಸೇರಿಸಿ ಹಾಗೂ ಸುಳ್ಳು ಅಂಚೆ ಖಾತೆ ಸಂಖ್ಯೆಯನ್ನು ನೀಡಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿರುವುದು ದಾಖಲಾತಿಗಳಿಂದ ಸಾಬೀತಾಗಿರುತ್ತದೆ.

**(ಪುಟ ಸಂಖ್ಯೆ: 135,147,148 513 ರಿಂದ 521 ರ ವರೆಗಿನ ಪುಟಗಳನ್ನು ಪರಾಂಬರಿಸುವುದು )**

On perusal of I.O. Report i.e., the muster roll no. 2876 at Page no. 134 it is found that, the family member of Basavaraj Singhe and Hanumanth Mallappa Basnakar i.e. in all 16 persons are falsely shown to have worked in the work of plantation near Hanuman temple without their knowledge and money has been misappropriated through false accounts at post office, Belamagi. Therefore it is to be

inferred that the work of plantation near Hanuman Temple was not executed and the entire amount of Rs. 48,750/- spent is to be inferred as misappropriated by respondents 1, 2 & 5 by falsifying the documents.

**ವಿಚಾರಣಾಧಿಕಾರಿಗಳ ಅಭಿಪ್ರಾಯ :-**

ಈ ಮೇಲಿನ ಅಂಶಗಳನ್ನು ಅವಲೋಕಿಸಲಾಗಿ ಆಪಾದಿತ ನೌಕರರಾದ **1) ಶ್ರೀ. ಅಶೋಕ** ತಂದೆ ದೇವಿಂದ್ರಪ್ಪ ಸುತಾರ, ಹಿಂದಿನ ಗ್ರಾಮ ಪಂಚಾಯತ ಅಧ್ಯಕ್ಷರು, ಗ್ರಾಮ ಪಂಚಾಯತ ಕಾರ್ಯಾಲಯ ಬೆಳಮಗಿ ತಾ: ಆಳಂದ ಜಿ:ಕಲಬುರಗಿ **2) ಶ್ರೀ. ದಯಾನಂದ ಜಾಧವ**, ಹಿಂದಿನ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ, ಬೆಳಮಗಿ ಗ್ರಾಮ ಪಂಚಾಯತಿ, ಬೆಳಮಗಿ ತಾ:ಆಳಂದ ಜಿ:ಕಲಬುರಗಿ ಮತ್ತು ಅರ್ಜಿ ವಿಚಾರಣೆ ಕಾಲಕ್ಕೆ 3) ಶ್ರೀ.ರಾಕೇಶ, ಪೋಸ್ಟ್ ಮಾಸ್ಟರ್,ಬೆಳಮಗಿ ಪೋಸ್ಟ ಆಫೀಸ್ ಇವರುಗಳ ವಿರುದ್ಧ ಅರ್ಜಿಯಲ್ಲಿ ದೂರಿದ ವಿಷಯಗಳು ಸತ್ಯವಾಗಿದ್ದು, ಅರ್ಜಿ ವಿಚಾರಣೆ ಕಾಲಕ್ಕೆ ಸಂಗ್ರಹಿಸಿದ ಸಾಕ್ಷಿ ಹೇಳಿಕೆಗಳು, ದಾಖಲೆ ಪತ್ರಗಳಿಂದ ಮೇಲೆ ನಮೂದಿಸಿದ ಮೂರು ಜನರು ಸರ್ಕಾರದಿಂದ ಗ್ರಾಮ ಪಂಚಾಯತಿ ಬೆಳಮಗಿಗೆ 2011-12 ನೇ ಸಾಲಿನಲ್ಲಿ ನರೇಗಾ ಯೋಜನೆಯಲ್ಲಿ ಮಂಜೂರಾಗಿ ಬಂದಿದ್ದ ಸರ್ಕಾರದ ಅನುದಾನದಲ್ಲಿ ಭಾಗಶಃ ಅನುದಾನವನ್ನು ಖೋಟ್ಟಿ ದಾಖಲೆಗಳನ್ನು ಸೃಷ್ಟಿಸಿ, ತನ್ನ ಅಧಿಕಾರದ ದುರುಯೋಗ ಪಡಿಸಿಕೊಂಡು ಗ್ರಾಮದ ಕೂಲಿಕಾರರಿಗೆ ಅನುದಾನ ಹಂಚದೆ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿದ್ದು ಸಾಬೀತಾಗಿರುತ್ತದೆ.

ಕಾರಣ ಸದರಿ ಅರ್ಜಿಯಲ್ಲಿ ನಮೂದಿಸಿದ ಅಂಶಗಳೆಲ್ಲವುಗಳನ್ನು ಕೂಲಂಕುಷವಾಗಿ ವಿಚಾರಣೆಗೆ ಒಳಪಡಿಸಿದಾಗ ಸದರಿ ಅರ್ಜಿಯು ಸತ್ಯಾಂಶದಿಂದ ಕೂಡಿರುತ್ತದೆ. 2011-12 ನೇ ಸಾಲಿನ ನರೇಗಾ ಯೋಜನೆ ಅಡಿಯಲ್ಲಿ ಬೆಳಮಗಿ ಗ್ರಾಮ ಪಂಚಾಯತಿಗೆ ಮಂಜೂರಾಗಿರುವ ಕಾಮಗಾರಿಗಳಲ್ಲಿ ಅವ್ಯವಹಾರ ಆಗಿರುವುದು ದಾಖಲಾತಿಗಳಿಂದ ಮತ್ತು ಸಾಕ್ಷಿದಾರರ ಹೇಳಿಕೆಗಳ ಆಧಾರದ ಮೇಲಿಂದ ಸಾಬೀತಾಗಿರುತ್ತದೆ.

ಅಲ್ಲದೇ ಈ ಅವ್ಯವಹಾರದ ಕುರಿತು ಓಂಬಡ್ಸಮನ್ ನೇಮಕ ಮಾಡಿದ್ದು, ಓಂಬಡ್ಸಮನ್ ಈ ಕುರಿತು ವಿಚಾರಣೆ ಕೈಕೊಂಡು ಈ ಕಾಮಗಾರಿಗಳಲ್ಲಿ ಅವ್ಯವಹಾರವಾದ ಬಗ್ಗೆ ಮನಗಂಡು ತಪ್ಪಿತಸ್ಥರಿಂದ ದಂಡದ ಹಣ ವಸೂಲು

ಮಾಡುವಂತೆ ಆದೇಶ ಮಾಡಿದ್ದು ಸದರಿ ಓಂಬಡ್ಸಮನ್ ವರದಿಯ ಧೃಢಿಕೃತ ಪ್ರತಿಯನ್ನು ಸಹ ಈ ಕೂಡಾ ಲಗತ್ತಿಡಲಾಗಿದೆ.

ಈ ಅರ್ಜಿಯ ವಿಚಾರಣೆಯ ಕಾಲಕ್ಕೆ ಅಂದಿನ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ **ಅಶೋಕ ತಂದೆ ದೇವಿಂದ್ರಪ್ಪ ಸುತಾರ** (R-1), ಅಂದಿನ ಪಿ.ಡಿ.ಓ **ದಯಾನಂದ ಜಾಧವ** (R-2), ಪೋಸ್ಟ ಮಾಸ್ಟರ್ ಲೋಕೇಶ.ಬಿ. ಮೆಣಸೆ, **ಸುದರ್ಶನ, ಜೆ.ಇ** (R-3),. ಪಿ.ಆರ್.ಇ ಉಪವಿಭಾಗ ಆಳಂದ, **ವಿಲಾಸರಾವ ಹರಸೂರ** (R-4), (ಸಹಾಯಕ ಕೃಷಿ ಅಧಿಕಾರಿ) ಜಲಾನಯನ ಅಧಿಕಾರಿಗಳು ಆಳಂದ, **ಚಂದ್ರಕಾಂತ** (R-5), ಶಾಖಾಧಿಕಾರಿ ಸಾಮಾಜಿಕ ಅರಣ್ಯ ಇಲಾಖೆ ಆಳಂದ ಇವರುಗಳು ಕೂಡಿಕೊಂಡು 2011–12 ನೇ ಸಾಲಿನ ಬೆಳಮಗಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆ ಅಡಿಯಲ್ಲಿ ನಡೆಯಬೇಕಾದ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿರುವ ಬಗ್ಗೆ ದಾಖಲಾತಿಗಳಿಂದ ಹಾಗೂ ವಿಚಾರಣೆಯಿಂದ ಸಾಬೀತಾಗಿರುತ್ತದೆ.

II. **2ನೇ ಅರ್ಜಿದಾರರಾದ ಶ್ರೀ ಶಿವಶರಣಪ್ಪ ಕಲ್ಯಾಣರಾವ ಮಾಲಿಪಾಟೀಲ, ಮು:ಪೋ:ಬೆಳಮಗಿ, ತಾ:ಆಳಂದ, ಜಿ:ಕಲುಬರಗಿ/ಗುಲಬರ್ಗಾ ರವರು ಸಲ್ಲಿಸಿದ ಅರ್ಜಿ ವಿಚಾರಣೆ ಕುರಿತು ಸ್ಥಳ ಪರಿಶೀಲನೆ ಕುರಿತು ಬೆಳಮಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸನಗುಂದಾ, ಬೆಳಮಗಿ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ:**

ಗ್ರಾಮ ಪಂಚಾಯತಿ ಬೆಳಮಗಿ ವ್ಯಾಪ್ತಿಗೆ 2011–12 ನೇ ಸಾಲಿನಲ್ಲಿ ನರೇಗಾ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಲ್ಲಿ ಅವ್ಯವಹಾರ ಆಗಿರುವ ಬಗ್ಗೆ ಈಗಾಗಲೇ (1) ಅರ್ಜಿ ಸಂಖ್ಯೆ: 2272/2012 ಶ್ರೀ.ಅಂಬಾರಾಯ ತಂದೆ ಶರಣಪ್ಪ ಬೆಳಮಗಿ ಸಾ:ಬೆಳಮಗಿ ಮತ್ತು (2) ಅರ್ಜಿ ಸಂಖ್ಯೆ: 2274/2016 ಶ್ರೀ.ಕುಪೇಂದ್ರ ತಂದೆ ಅಂಬಾರಾಯ ತಾವಡೆ ಸಾ:ಬಾಲಖೇಡ ರವರುಗಳ ಅರ್ಜಿಯಲ್ಲಿ ಸದರಿ ಅರ್ಜಿಯಲ್ಲಿ ನಮೂದಿಸಿದ ಅಂಶಗಳನ್ನು ವಿಚಾರಣೆ ಕೈಕೊಳ್ಳಲಾಗಿದ್ದು, ಇದರಲ್ಲಿ ಅಂದಿನ ಗ್ರಾಮ ಪಂಚಾಯತಿಯ ಅಧ್ಯಕ್ಷ **ಶ್ರೀ.ಅಶೋಕ ತಂದೆ ದೇವಿಂದ್ರಪ್ಪ ಸುತಾರ (R-1),** ಮತ್ತು ಅಂದಿನ ಪಿ.ಡಿ.ಓ. **ಶ್ರೀ. ದಯಾನಂದ ಜಾಧವ (R-2)** ಇವರುಗಳು ಇನ್ನಿತರ ಅಧಿಕಾರಿಗಳೊಂದಿಗೆ ಕೂಡಿಕೊಂಡು ಸರ್ಕಾರದಿಂದ ಮಂಜೂರಾಗಿರುವ ಹಣವನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿರುವುದು ಸಾಬೀತಾಗಿರುತ್ತದೆ.

**III.3ನೇ ಅರ್ಜಿದಾರರಾದ ಶ್ರೀ ಕುಪೇಂದ್ರ ತಂದೆ ಅಂಬಾರಾಯ ತಾವಡೆ, ಗ್ರಾಮ:ಬಾಲಖೇಡ, ಗ್ರಾ.ಪಂ. ಬೆಳಮಗಿ, ಮು:ಆಶ್ರಯ ಕಾಲೋನಿ, ಕಲಬುರಗಿ ರವರು ಸಲ್ಲಿಸಿದ ಅರ್ಜಿ ವಿಚಾರಣೆ ಕುರಿತು ಬೆಳಮಗಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.**

**1)ಶ್ರೀ. ಶರಣಪ್ಪ ತಂದೆ ಚಂದಪ್ಪ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿ(ಕಾಮಗಾರಿ ಕೋಡ್ ಸಂಖ್ಯೆ: 15-15-002-030-007-01-05-11).**

ಸದರಿ ಕಾಮಗಾರಿ ಸ್ಥಳಕ್ಕೆ ಬೆಳಮಗಿ ಗ್ರಾಮ ಪಂಚಾಯತಿಯ ಮಾಜಿ ಉಪಾಧ್ಯಕ್ಷರಾದ ಅಂಬಾರಾಯ ತಂದೆ ಶರಣಪ್ಪ ಬೆಳಮಗಿ ಇವರೊಂದಿಗೆ ಭೇಟಿ ನೀಡಿದ್ದು, **ಶ್ರೀ. ಶರಣಪ್ಪ ತಂದೆ ಚಂದಪ್ಪ ಇವರ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿ** ನಡೆದಿರುತ್ತದೆ. ಇದರ ಬಗ್ಗೆ ಮಾಹಿತಿ ಪಡೆಯಲು ಶ್ರೀ.ಶರಣಪ್ಪ ತಂದೆ ಚಂದಪ್ಪ ಬಸನಾಕರ ಇವರ ಹಾಗೂ ಅವರ ಮಗನಾದ ಕಲ್ಯಾಣ ಬಸನಾಕರ ಇವರ ಹೇಳಿಕೆ ಪಡೆಯಲಾಗಿ ಅವರು ತಿಳಿಸಿದ್ದೇನೆಂದರೆ, ಸದರಿ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಮಾಡದೇ ನರೋಣಾ ಪೊಲೀಸ್ ಠಾಣೆಯಲ್ಲಿ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದ ಬಗ್ಗೆ ದೂರು ದಾಖಲಿಸಿದ ನಂತರ ಬಂದು ನಮ್ಮ ಹೊಲ ಸರ್ವೆ ನಂ. 237 ರಲ್ಲಿ ಬದು ನಿರ್ಮಾಣ ಮಾಡಿಸಿರುತ್ತಾರೆಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರ ಕುಪೇಂದ್ರ ತಾವಡೆ ಇವರು ತಮ್ಮ ಅರ್ಜಿಯಲ್ಲಿ ಆಪಾದಿಸಿದಂತೆ ನರೇಗಾ ಯೋಜನೆ ಅಡಿಯಲ್ಲಿ ಗ್ರಾಮ ಪಂಚಾಯತಿ ಬೆಳಮಗಿಗೆ ಮಂಜೂರಾದ ಕಾಮಗಾರಿ ಸಂಖ್ಯೆ: 15-15-002-030-007-01-05-11 ದಿನಾಂಕ: 14.03.2012 ರಿಂದ 28.03.2012 ರ ದಾಖಲಾತಿಗಳನ್ನು ಪರಿಶೀಲಿಸಿದಾಗ ಕುಪೇಂದ್ರ ತಾವಡೆ ಹೆಸರಿನಲ್ಲಿರುವ ಸದರಿಯವರು ಈ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿಯಲ್ಲಿ ನರೇಗಾ ಯೋಜನೆ ಅಡಿಯಲ್ಲಿ ಕೂಲಿ ಕೆಲಸಕ್ಕೆ ಹಾಜರಾಗದಿದ್ದರೂ ಅವರ ಮತ್ತು ಅವರ ಹೆಂಡತಿ-ಮಕ್ಕಳ ಹೆಸರಿನಲ್ಲಿ ಸುಳ್ಳು ಹಾಜರಾತಿ ಹಾಕಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

**2) ಅರ್ಜಿದಾರ ಕುಪೇಂದ್ರ ತಾವಡೆ ಇವರ ಹೆಸರಿನಲ್ಲಿ ಬೆಳಮಗಿ ಪೋಸ್ಟ ಆಫೀಸದಲ್ಲಿ ಬೋಗಸ್ ಅಂಚೆ ಖಾತೆ ತರೆದು ಹಣ ಪಾವತಿಸಿಕೊಂಡಿರುತ್ತಾರೆ.**

ಸದರಿ ವಿಷಯದ ಕುರಿತು ಪರಿಶೀಲಿಸಲಾಗಿ ಕುಪೇಂದ್ರ ತಾವಡೆ ಇವರ ಕಾಮಗಾರಿಯ ಬಗ್ಗೆ ಅರ್ಜಿದಾರನೊಂದಿಗೆ ಸದರಿ ಹೊಲಕ್ಕೆ ಭೇಟಿ ನೀಡಿದ್ದು, ಕಾಮಗಾರಿ ಸಂಖ್ಯೆ: 15-15-002-030-007-01-05-11 ದಿನಾಂಕ: 14.03.2012

ರಿಂದ 28.03.2012 ರ ದಾಖಲಾತಿಗಳನ್ನು ಪರಿಶೀಲಿಸಿದಾಗ **ಕುಪೇಂದ್ರ ತಾವಡೆ ಹೆಸರಿನಲ್ಲಿರುವ ಅಂಚೆ ಖಾತೆ ಸಂಖ್ಯೆ:5282567 ನೇದ್ದರಲ್ಲಿ ಹಣವನ್ನು ಜಮಾ ಮಾಡಿರುವ** ಬಗ್ಗೆ ನಮೂದಾಗಿದ್ದು, ಆದರೆ ಈ ಖಾತೆಯ ಬಗ್ಗೆ ಅಂಚೆ ಕಛೇರಿಯಲ್ಲಿ ವಿಚಾರಣೆ ಮಾಡಿದಾಗ ಅಂತಹ **ಖಾತೆ ಸಂಖ್ಯೆ ಇರುವುದಿಲ್ಲವೆಂದು** ತಿಳಿದುಬಂದಿರುತ್ತದೆ. ಕಾರಣ ನಕಲಿ ಅಂಚೆ ಖಾತೆ ಸೃಷ್ಟಿಸಿರುವ ಬಗ್ಗೆ ಸಾಬೀತಾಗುತ್ತದೆ.

On persual of Muster roll no. 2894 at Page no. 390 of I.O. report, the complainant Kupendra and his family members are shown as labourers. The report of I.O. show that they have not worked as labourers and inspite of it false attendance is noted in the muster roll. Also the account to which wages are deposited is stated to be not existing in the post office. Under the circumstances, the entire expenditure of Rs. 80,000/- shown to be spent for executing the work of formation of Bund in the land of Sharanappa S/o Chandrappa is to be inferred as misappropriated by Respondents 1, 2 & 4 by falsifying the documents.

**3) ನರೇಗಾ ಯೋಜನೆ ಅಡಿಯಲ್ಲಿ ನಮೂನೆ 6 ರಲ್ಲಿ ನನ್ನ ಜಾಬಕಾರ್ಡ ಬಳಿಸಿ ನನಗೆ ಕೆಲಸ ನೀಡದೇ ಅನ್ಯಾಯ ಮಾಡಿರುತ್ತಾರೆ.**

ಅರ್ಜಿದಾರರ ಹೆಸರಿನಲ್ಲಿ ಸುಳ್ಳು ಅಂಚೆ ಖಾತೆ ತೆರೆದಿದ್ದು ಹಾಗೂ ಕಾಮಗಾರಿಗಳನ್ನು ಪ್ರಾರಂಭದಲ್ಲಿ ಮಾಡದೇ ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ನಂತರ ಕಾಮಗಾರಿಗಳನ್ನು ವಿಳಂಬವಾಗಿ ಕೈಕೊಂಡಿರುವುದು ತಿಳಿದುಬಂದಿದ್ದರಿಂದ ಅರ್ಜಿದಾರರಿಗೆ ಕಾಮಗಾರಿಗಳಲ್ಲಿ ಕೂಲಿ ಕೆಲಸ ನೀಡದೇ ಮೋಸ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಕಾರಣ 2011-12 ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಬೆಳಮಗಿ ವತಿಯಿಂದ ನರೇಗಾ ಯೋಜನೆ ಅಡಿಯಲ್ಲಿ ಕಾಮಗಾರಿಗಳಲ್ಲಿ ಅವ್ಯವಹಾರ ಆಗಿರುವುದು ಸಾಬೀತಾಗಿರುತ್ತದೆ.

**ವಿಚಾರಣಾಧಿಕಾರಗಳ ಅಭಿಪ್ರಾಯ :**

ಸದರಿ ಅರ್ಜಿಗಳಲ್ಲಿ ಮಾಡಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳು ಸಂಗ್ರಹಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅಂದಿನ ಗ್ರಾಮ ಪಂಚಾಯತಿಯ ಅಧ್ಯಕರಾದ **ಶ್ರೀ ಅಶೋಕ ತಂದೆ ದೇವಿಂದ್ರಪ್ಪ ಸುತಾರ (R-1)**, ಹಾಗೂ ಅಂದಿನ ಪಿ.ಡಿ.ಓ., **ಶ್ರೀ ದಯಾನಂದ ಜಾಧವ (R-2)**, ಪೋಸ್ಟ್ ಮಾಸ್ಟರ್ ಶ್ರೀ ಲೋಕೇಶ, ಬಿ. ಮೆಣಸೆ, **ಶ್ರೀ ಸುದರ್ಶನ ಜೆ.ಇ. (R-3)**, ಪಿ.ಆರ್.ಇ., ಉಪ ವಿಭಾಗ ಆಳಂದ **ಶ್ರೀ ವಿಲಾಸರಾವ ಹರಸೂರ (R-4)**, (ಸಹಾಯಕ ಕೃಷಿ ಅಧಿಕಾರಿ), ಜಲಾನಯನ ಅಧಿಕಾರಿಗಳು ಆಳಂದ, **ಶ್ರೀ ಚಂದ್ರಕಾಂತ (R-5)**, ಶಾಖಾಧಿಕಾರಿ, ಸಾಮಾಜಿಕ ಅರಣ್ಯ ಇಲಾಖೆ, ಆಳಂದ ರವರುಗಳು ಕೂಡಿಕೊಂಡು 2011–12 ನೇ ಸಾಲಿನಲ್ಲಿ ಬೆಳಮಗಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆ ಅಡಿಯಲ್ಲಿ ನಡೆಯಬೇಕಾದ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿರುವ ಬಗ್ಗೆ ದಾಖಲಾತಿಗಳಿಂದ ಹಾಗೂ ವಿಚಾರಣೆಯಿಂದ ಸಾಬೀತಾಗಿರುತ್ತದೆ.

The consolidated sum of money which is prima-facie found to be misappropriated by showing the names of labourers in the muster rolls who are dead, who are minors, who have not worked as labourers etc., and by drawing money showing fake accounts at Belamagi Post Office with respect to the following works at Belamagi village during the year 2011-12 as reported in the IO report is as under.

| Sl. No. | Work code mentioned in the Action plan | Name of the work | Heads of Expenditure in the Action Plan | Total Cost/ Expenditure of the work misappropriated | Respondents responsible for misappropriation of public funds. |
|---|---|---|---|---|---|
| 1. | 15-15-002-030-**006**-01-05-11 | ನೀಲಕಂಠ ಮಾಲಿಪಾಟೀಲ ಬಂಡಿಂಗ್ ಕೆಲಸ | ಜಲಸಂರಕ್ಷಣೆ | Rs. 50,000/- | Respondents 1, 2 & 4 |
| 2. | 15-15-002-030-**010**-01-05-11 | ಸಿದ್ರಾಮಪ್ಪಾ ಬಸ್ನಾಕರ ಹೊಲದಲ್ಲಿ ಬದು ನಿರ್ಮಾಣ | ಜಲಸಂರಕ್ಷಣೆ | Rs. 98,500/- | Respondents 1, 2 & 4 |
| 3. | 15-15-002-030-**018**-02-06-11 | ಹನುಮನ ಗುಡಿಯ ಹತ್ತಿರ ಸಸಿ ನೆಡುವುದು | ಅರಣ್ಯ | Rs. 48,750/- | Respondents 1, 2 & 5 |
| 4. | 15-15-002-030-**029**-04-10-11 | ದೇವಿಂದ್ರ ರಾಮಚಂದ್ರ ಸುತಾರ ಹೊಲದಲ್ಲಿ ಭಾವಿ ಹೂಳೆತ್ತುವುದು | ಪ.ಜಾ/ಪ.ಪಂ. ಆಯ್.ಎ.ವಾಯ್. ಫಲಾನುಭವಿಗಳ ಜಮೀನಿನಲ್ಲಿ ನೀರಾವರಿ ಸೌಲಭ್ಯ | Rs. 84,000/- | Respondents 1, 2 & 3 |

| | | | | | |
|---|---|---|---|---|---|
| 5. | 15-15-002-030-**030**-04-10-11 | ಮಲ್ಲಿನಾಥ ಸಂಗಣ್ಣಾ ಹೊಲದಲ್ಲಿ ಭಾವಿ ಹೂಳೆತ್ತುವುದು | ಪ.ಜಾ/ಪ.ಪಂ. ಆಯ್.ಎ.ವಾಯ್. ಫಲಾನುಭವಿಗಳ ಜಮೀನಿನಲ್ಲಿ ನೀರಾವರಿ ಸೌಲಭ್ಯ | Rs. 84,000/- | Respondents 1, 2 & 3 |
| 6. | 15-15-002-030-**033**-06-05-11 | ಸಂಗಣ್ಣ ಡೋರ ಸ.ನಂ. 57 ಜಮೀನು ಅಭಿವೃದ್ಧಿ | ಜಮೀನಿನ ಅಭಿವೃದ್ಧಿ | Rs. 1,00,000/- | Respondents 1,2 & 3 |
| 7. | 15-15-002-030-**007**-01-05-11 | ಶರಣಪ್ಪಾ ಚಂದಪ್ಪಾ ಹೊಲದಲ್ಲಿ ಬದು ನಿರ್ಮಾಣ | ಜಲಸಂರಕ್ಷಣೆ | Rs. 80,000/- | Respondents 1, 2 & 4 |
| | | | **Total** | **Rs. 5,45,250/-** | |

7. On the basis of the I.O. report, respondent no.3 to 5 was added and comments of all the respondents were called. The respondent no.2 and 4 have submitted similar comments of even date 13/11/2017 by enclosing the copy of the order of ombudsman in case no. 2/2014-15/413 dated 31/01/2015 along with letter of Chief Executive Officer, Zilla Panchayath, Kalaburgi dated 25/07/2015 addressed to Commissioner, RDPR and Panchayath Raj, Bengaluru where in it is stated that the amount of Rs. 4,946/- and Rs. 28,018/- ordered by ombudsman has been recovered from respondent no.2 and 4 respectively and therefore has prayed to drop them from the proceedings. There is no proper description of the works in the order of the Ombudsman dt. 31/01/2015. When the respondents are found to have misappropriated public funds by falsifying the documents as observed above, the comments of respondents 2 & 4 cannot be accepted at this stage.

8. Respondent no.1, 3 and 5 have not submitted their comments inspite of service of this office notice. Therefore adverse inference is to be drawn against the respondent no. 1, 3 and 5 with respect to the above said misconduct.

9. In view of the above report of I.O. the **respondent no.1 to 5** are prima-facie found to have committed dereliction of duty with respect to the above said misconduct.

10. It is ascertained by calling Respondent no. 5 (Mobile no. 9342024006) that he is retired on 31/03/2018. Respondent no.5 is found to have misappropriated public funds of Rs. 48,750/- along with respondents 1 & 2. Misappropriation of public funds amounts to continuous cause of action. Therefore the limitation of 4 years prescribed under rule 214(2)(b) of KCSR is not applicable against Respondent no. 5. Under the circumstances, disciplinary proceedings can be initiated against Respondent no. 5

11. The facts and materials on record prima-facie show that, the respondent Nos 2 to 5 have committed misconduct as per Rule 3 (i) to (iii) of KCS (Conduct) Rules, 1966. Accordingly, now, acting under Section 12(3) of The Karnataka Lokayukta Act, recommendation is made to the Competent Authority to initiate disciplinary proceedings against **Respondent No.2 Sri Dayanand Jadhav,** Panchayath Development Officer, Belamagi Grama Panchayath, Aland Taluk, Kalaburgi District **(Date of Retirement: 30/04/2025) Respondent No.3. Sri Sudarshan,** Junior Engineer, PRE Sub-Division, Aland, Kalaburgi District, **Respondent No. 4. Sri Vilas S. Harasoora,** Water Shed Development Officer, (Assistant Agriculture Officer), Aland, Kalaburgi District **(Date of Retirement: 31/03/2026)** and **Respondent No. 5 Sri Chandrakanth,** Section Officer, Social Forestry, Forest Department, Aland, Kalaburgi District **(Date of Retirement: 31/03/2018)** and to entrust the inquiry to this Authority

**31/03/2018)** and to entrust the inquiry to this Authority under Rule 14-A of the Karnataka Civil Services (Classification, Control and Appeal) Rules, 1957 along with sanction as required under section 214(2)(b) of KCSRs against respondent No. 5.

**Respondent no. 1 Sri. Ashok D. Sutar** is the then President of Belamagi Grama Panchayath. Recommendation is made to take action against Respondent no. 1 under the provisions of Panchayath Raj Act and also to recover the above stated loss caused to the Government.

12. Further, as per Section 12(4) of Karnataka Lokayukta Act, 1984, the Competent Authority shall intimate to this Authority within one month from the date of receipt of this report, as to the action taken or proposed to be taken on the basis of this report.

Connected records are enclosed.

N. Ananda
(Justice N. ANANDA),
Upalokayukta-1,
State of Karnataka.